# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 536 |
| ಉತ್ತರಿಸಬೇಕಾದ ದಿನಾಂಕ | : | 11–03–2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಡತನ ರೇಖೆಗಿಂತ ಕೆಳಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲ್ಪಸಂಖ್ಯಾತ, ಮಹಿಳಾ ಹಾಗೂ ಅಂಗವಿಕಲರಿಗೆ ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಾಗಿ ನೋಂದಾಯಿಸುವ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು; | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸುವ ಯೋಜನೆಯನ್ನು 2005–06 ರಿಂದ ಮಹಿಳೆಯರನ್ನು ಹಾಗೂ ಅಂಗವಿಕಲರನ್ನು ಸದಸ್ಯರನ್ನಾಗಿ ನೋಂದಾಯಿಸುವ ಯೋಜನೆಯನ್ನು 2014–15 ರಿಂದ ಜಾರಿಗೆ ತರಲಾಯಿತು.<br><br>ನಂತರ ಈ ಎಲ್ಲಾ ಯೋಜನೆಯನ್ನು ಒಗ್ಗೂಡಿಸಿ 2015–16ನೇ ಸಾಲಿನಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ / ಹಿಂದುಳಿದ / ಅಲ್ಪಸಂಖ್ಯಾತ / ಅಲೆಮಾರಿ ಜನಾಂಗದ ವರ್ಗದವರನ್ನು / ಮಹಿಳೆಯರನ್ನು / ವಿಕಲಚೇತನರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರನ್ನು ಸದಸ್ಯರನ್ನಾಗಿ ನೋಂದಾಯಿಸುವ ಯೋಜನೆಯನ್ನಾಗಿ ಜಾರಿಗೆ ತರಲಾಗಿದೆ. |
| ಆ) | ಈ ಯೋಜನೆಯ ಉದ್ದೇಶವೇನು: ನೋಂದಣಿ ಮಾಡಲು ಹಣವನ್ನು ಫಲಾನುಭವಿಗಳು ಭರಿಸಬೇಕೆ: ನೋಂದಣಿ ಮಾಡಲು ಬೇಕಾಗುವ ಮೊತ್ತವೆಷ್ಟು; | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ / ಹಿಂದುಳಿದ / ಅಲ್ಪಸಂಖ್ಯಾತ / ಅಲೆಮಾರಿ ಜನಾಂಗದ ವರ್ಗದವರನ್ನು / ಮಹಿಳೆಯರನ್ನು / ವಿಕಲಚೇತನರನ್ನು ಹಾಗೂ ಬಡತನ ರೇಖೆಗಿಂತ ಕೆಳಗಿರುವವರನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸುವ ಮುಖಾಂತರ ಸಹಕಾರ ಕ್ಷೇತ್ರದ ಮುಖ್ಯವಾಹಿನಿಗೆ ತಂದು ಅವರಿಗೆ ಸರ್ಕಾರದ ವಿವಿಧ ಯೋಜನೆಯ ಸೌಲಭ್ಯವನ್ನು ಸಹಕಾರ ಸಂಘಗಳ ಮೂಲಕ ತಲುಪಿಸುವ ಉದ್ದೇಶವನ್ನು ಹೊಂದಲಾಗಿದೆ. |

<table>
<tr>
<td></td>
<td></td>
<td>ಸದರಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಸಹಕಾರ ಸಂಘದ ಒಂದು ಷೇರಿನ ಮೌಲ್ಯ ಅಥವಾ ಗರಿಷ್ಠ ರೂ.1000/–ಗಳನ್ನು, ಸಕ್ಕರೆ ಕಾರ್ಖಾನೆಯಾದಲ್ಲಿ ಗರಿಷ್ಠ ರೂ.2500/–ಗಳನ್ನು ಹಾಗೂ ಹಿಂದುಳಿದ ವರ್ಗ/ ಅಲ್ಪ ಸಂಖ್ಯಾತ ವರ್ಗ/ ಮಹಿಳೆಯರು / ವಿಕಲಚೇತನರು / ಮಹಿಳೆಯರು / ಬಿಪಿಎಲ್‌ದಾರರಿಗೆ ಸಹಕಾರ ಸಂಘದ ಒಂದು ಷೇರಿನ ಮೌಲ್ಯ ಅಥವಾ ಗರಿಷ್ಠ ರೂ.500/–ಗಳನ್ನು, ಫಲಾನುಭವಿಗಳ ಪರವಾಗಿ ಸರ್ಕಾರ ಭರಿಸುತ್ತದೆ. ಸಹಕಾರ ಸಂಘದ ಷೇರು ಮೊತ್ತ ಸರ್ಕಾರ ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿದ್ದಲ್ಲಿ ಬಾಕಿ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ.</td>
</tr>
<tr>
<td>ಇ)</td>
<td>ಈ ಯೋಜನೆಯ ಜಾರಿಯಾದಾಗಿನಿಂದ ಇಂದಿನವರೆಗೂ ನೋಂದಣಿಯಾದ ಫಲಾನುಭವಿಗಳ ಸಂಖ್ಯೆ ಎಷ್ಟು?</td>
<td>ಸದರಿ ಯೋಜನೆಯು ಜಾರಿಯಾದಾಗಿನಿಂದ ಇದುವರೆಗೂ ಸದಸ್ಯರನ್ನಾಗಿ ನೋಂದಾಯಿಸಿದ ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>ಕ್ರ.ಸಂ</th><th>ವರ್ಗ</th><th>ಭೌತಿಕ</th></tr>
<tr><td>1</td><td>ಪರಿಶಿಷ್ಟ ಜಾತಿ</td><td>8,94,659</td></tr>
<tr><td>2</td><td>ಪರಿಶಿಷ್ಟ ಪಂಗಡ</td><td>4,17,171</td></tr>
<tr><td>3</td><td>ಹಿಂದುಳಿದ ವರ್ಗ</td><td>2,45,608</td></tr>
<tr><td>4</td><td>ಅಲ್ಪಸಂಖ್ಯಾತ ವರ್ಗ</td><td>40,795</td></tr>
<tr><td>4</td><td>ಮಹಿಳೆ</td><td>4,14,087</td></tr>
<tr><td>5</td><td>ವಿಕಲಚೇತನ</td><td>45,972</td></tr>
<tr><td>6</td><td>ಬಡತನ ರೇಖೆಗಿಂತ ಕೆಳಗಿರುವವರು</td><td>5,09,850</td></tr>
<tr><td colspan="2">ಒಟ್ಟು</td><td>25,68,142</td></tr>
</table>
</td>
</tr>
</table>

**ಸಂಖ್ಯೆ: ಸಿಒ 58 ಸಿಎಲ್‌ಎಸ್ 2025**

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**